**PCR 11/2022**
**PW-2**

**ಪ್ರಧಾನ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಸೊರಬ**

**ಪಿ.ಸಿ.ಆರ್ ನಂ.11/2022**

**ಹೆಸರು** :- **ಜಗದೀಶ ಗೌಡ**

**ತಂದೆಯ ಹೆಸರು** :- **ಭದ್ರಯ್ಯಗೌಡ**

**ವಯಸ್ಸು** :- **ವರ್ಷ**

**ಉದ್ಯೋಗ** :- **ಕೂಲಿ ಕೆಲಸ**

**ಸ್ಥಳ** :- **ಹೊರನಾಡು**

**ದಿನಾಂಕಃ 24.06.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.**

ದಿಃ 27.10.2021 ರಂದು ಆರೋಪಿಗಳಾದ ಪ್ರಶಾಂತ, ಶಬ್ಬೀರ್ ಖಾನ್, ಹೇಮಲತಾ, ಶೇಷಪ್ಪ ಬಿನ್ ರಾಮಪ್ಪ, ಜಗದೀಶ, ಸತೀಶ, ಹರೀಶ, ಮಂಜುನಾಥ, ವಿ.ಬಿ.ಪಾಟೀಲ್ ವೀರಭದ್ರಗೌಡ, ವಿಘ್ನೇಶ, ಮಂಗಳ, ಬಸವರಾಜಗೌಡ, ಶರಣಗೌಡ, ಸಿದ್ದುಗೌಡ, ಮಲ್ಲಿನಾಥ ಗೌಡ ಬಿನ್ ನಾಗರಾಜಗೌಡ ಇವರೆಲ್ಲರೂ ಬೆಳಗ್ಗೆ 9.10 ಸಮಯಕ್ಕೆ ಗುಂಪು ಕಟ್ಟಿಕೊಂಡು ನಾವು ವಾಸವಾಗಿರುವ ತಾವರೇಹಳ್ಳಿ ಗ್ರಾಮದ ಖಾನೇಷುಮಾರಿ ನಂ.5 ರ ಪಶ್ಚಿಮ ಭಾಗದಲ್ಲಿ ಗುಂಪು ಕಟ್ಟಿಕೊಂಡು ಬಂದು ನಿಂತಿರುತ್ತಾರೆ. ನಾವು ಯಾಕೆ ಬಂದಿದ್ದೀರಿ ಎಂದು ವಿಚಾರಿಸಿದಾಗ ನ್ಯಾಯಾಲಯದ ಆದೇಶವಿದೆ, ಆಗ ನಾವು ಆದೇಶದ ಪ್ರತಿಯನ್ನು ಕೆಳಿರುತ್ತೇವೆ. ಆಗ ವಿ.ಬಿ ಪಾಟೀಲ್ ಎನ್ನುವವರು ಅಮಲ್ಜಾರಿ ನಂ.28/2018 ರ ಪ್ರತಿಯನ್ನು ತೋರಿಸಿರುತ್ತಾರೆ. ಆಗ ನಾನು ಇದರ ನೋಟಿಸ್ ನಮಗೆ ಬಂದಿರುವುದಿಲ್ಲ ಎಂದು ತಿಳಿಸಿರುತ್ತೇನೆ. ಇದರಲ್ಲಿ ಈ ಪೈಕಿ ಮನೆ ನಂ.6 ಅಂತ ಸ್ಪಷ್ಟವಾಗಿ ಉಲ್ಲೇಖವಾಗಿರುತ್ತದೆ ಎಂದು ತಿಳಿಸಿರುತ್ತೇನೆ. ನಮ್ಮ ಮನೆಯ ಮೇಲೆ ಯಾವುದೇ ವಾರೆಂಟ್ ಸಹ ತಂದಿಲ್ಲ. ಇದೇ ತರಹ ಒಂದು ವರ್ಷದ ಹಿಂದೆಯೂ ಸಹ

ಬಂದು ಪೂರ್ವ ಭಾಗದಲ್ಲಿ ಮನೆ ಅಮಲ್ಜಾರಿ ಮಾಡಲು ಬರುವುದಿಲ್ಲ ಎಂದು ಹೇಳಿರುತ್ತಾರೆ. ನಂತರ ನಾನು ನನ್ನ ಹತ್ತಿರ ಇರುವ ಆದೇಶದ ಪ್ರತಿಯನ್ನು ಅವರಿಗೆ ತೋರಿಸಿರುತ್ತೇನೆ. ಅವರು ನಮ್ಮನ್ನು ಸೆರೆಹಿಡಿದು, ಪೊಲೀಸ್ ಜೀಪಿನಲ್ಲಿ ಕೂರಿಸಿರುತ್ತಾರೆ. ನಂತರ ನಮ್ಮನ್ನು ಠಾಣೆಗೆ ಕರೆದುಕೊಂಡು ಬಂದು, ಸಂಜೆ 7.00 ಗಂಟೆಯವರೆಗೆ ಪೊಲೀಸ್ ಕಾವಲಿನಲ್ಲಿಟ್ಟಿರುತ್ತಾರೆ. ನಂತರ ಸಾಯಂಕಾಲ 7.00 ಗಂಟೆಗೆ ಕೋರ್ಟ್ ಅಮೀನರು ಠಾಣೆಗೆ ಬಂದು ನಮ್ಮ ಮೇಲೆ ಒಂದು ದೂರನ್ನು ದಾಖಲಿಸಿರುತ್ತಾರೆ. ನಂತರ ನಮ್ಮನ್ನು ರಾತ್ರಿ 12.00 ಗಂಟೆಗೆ ನ್ಯಾಯಾಧೀಶರ ಮುಂದೆ ಹಾಜರುಪಡಿಸಿರುತ್ತಾರೆ. ನಂತರ ನಮ್ಮನ್ನು ಸಾಗರದ ಜೈಲಿಗೆ ಕರೆದುಕೊಂಡು ಹೋಗಿರುತ್ತಾರೆ. ನಂತರ ನಾವು 6 ದಿನ ಜೈಲಿನಲ್ಲಿದ್ದು, 7 ನೇ ದಿನ ನಮ್ಮನ್ನು ಬಿಡುಗಡೆ ಮಾಡಿರುತ್ತಾರೆ. ನಂತರ ನಾವು ಮನೆಗೆ ಬಂದು ನೋಡಿದಾಗ ಮನೆಯ ಮುಂದಿನ ಬಾಗಿಲಿಗೆ ಬೀಗ ಹಾಕಿರುತ್ತಾರೆ. ಹಿಂದಿನ ಬಾಗಿಲಿಗೆ ಅಗಣಿ ಹಾಕಿರುತ್ತಾರೆ. ನಮ್ಮ ಮನೆಯ ಸಾಮಾನುಗಳನ್ನು ಕೊಟ್ಟಿಗೆಯಲ್ಲಿ ಇಟ್ಟಿರುವುದು ಕಂಡುಬಂತು. ಪಿಟಾರಿಯಲ್ಲಿ ನನ್ನ ದಾಖಲಾತಿಗಳು ಇತ್ತು. ನ್ಯಾಯಾಲಯಕ್ಕೆ ಅಗತ್ಯವಾದ ದಾಖಲಾತಿಗಳನ್ನು, ನೊಂದಾವಣೆ ಮಾಡಿದ ದಾಖಲಾತಿಗಳನ್ನು, ಉಚ್ಛ ನ್ಯಾಯಾಲಯ ಬೆಂಗಳೂರು, ಸರ್ವೋಚ್ಚ ನ್ಯಾಯಾಲಯದ ದೆಹಲಿಗೆ ಸಂಬಂಧಪಟ್ಟ ಜಡ್ಜ್ ಮೆಂಟ್ ಗಳನ್ನು, ಆಧಾರ ಕಾರ್ಡ್, ಐಡಿ ಕಾರ್ಡ್, ಕಿಸಾನ್ ಕ್ರೆಡಿಟ್ ಕಾರ್ಡ್, ಬ್ಯಾಂಕ್ ಪಾಸ್ ಬುಕ್ ಹೀಗೆ ಹಲವಾರು ದಾಖಲಾತಿಗಳು ಅದರ ಜೊತೆಗೆ ಕಂಚಿನ ಸಂದೂಕ ಇದ್ದು, ಅದರೊಳಗೆ 4 ಬೆಲೆಬಾಳುವ ಚಿನ್ನದ ಸರ, 4 ಬಂಗಾರದ ಬೆಲೆಬಾಳುವ ಬಳೆಗಳು, ಒಂದು ದೊಡ್ಡ ಬಂಗಾರದ ಬೆಲೆಬಾಳುವ ಖಡಗ, ಎರಡು ಉಂಗುರ, ನಮ್ಮ ತಾಯಿಗೆ ಸಂಬಂಧಪಟ್ಟ ಬೆಳ್ಳಿಯ ಲಿಂಗದ ಕಾಯಿ, ಬೆಳ್ಳಿ ನಾಣ್ಯ, 4 ಲಿಂಗದ ಕಾಯಿ, ರೂ.93,000/- ಹಣ ಅದರಲ್ಲಿ ಇದ್ದವು. ನಮ್ಮ ತಾಯಿಗೆ ಸಂಬಂಧಪಟ್ಟ

ಭಾವಚಿತ್ರಗಳು ಇದ್ದವು. ಇದಲ್ಲದೆ ನಮ್ಮ ದಿನಬಳಕೆ ಸಾಮಾನುಗಳು, ಬಟ್ಟೆ ಹಾಸಿಗೆಗಳು, ಪೂಜೆಗೆ ಸಂಬಂಧಪಟ್ಟ ದೀಪ, ಬೆಳ್ಳಿ ಮೂರ್ತಿ, ಕಂಚು ತಾಮ್ರ, ಸುಮಾರು 50 ಕೆ.ಜಿ ಭತ್ತ ಇದ್ದವು. ನಂತರ ನಾವು ಸೀದಾ ಪೊಲೀಸ್ ಠಾಣೆಗೆ ಹೋಗಿ ಸದರಿ ವಸ್ತುಗಳ ಬಗ್ಗೆ ವಿಚಾರಿಸಿದಾಗ, ನಮ್ಮ ಎದುರು ಪಾರ್ಟಿಯಾದ ವಿ.ಬಿ.ಪಾಟೀಲ್ ರವರಿಗೆ ವಹಿಸಿಕೊಟ್ಟಿರುತ್ತೇವೆ. ಮನೆಗೆ ಪುನಃ ಹೋದರೆ ಜೈಲಿಗೆ ಕಳುಹಿಸುತ್ತೇವೆ ಎಂದು ಬೆದರಿಕೆ ಹಾಕಿರುತ್ತೇವೆ. ನಂತರ ನಾವು ಪೊಲೀಸ್ ಠಾಣೆಗೆ ದೂರನ್ನು ಸಲ್ಲಿಸಲು ಹೋದಾಗ ಅವರು ದೂರನ್ನು ಸ್ವೀಕರಿಸಿರುವುದಿಲ್ಲ. ಅದಕ್ಕೆ ನಾವು ಖಾಸಗಿ ಪಿರ್ಯಾದುನ್ನು ಸಲ್ಲಿಸಿರುತ್ತೇವೆ. ಅಮಲ್ಜಾರಿ ಆದೇಶದ ವಿರುದ್ಧ ನಾವು ಸಾಗರದ 5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ ಮೇಲ್ಮನವಿಯನ್ನು ಸಲ್ಲಿಸಿರುತ್ತೇವೆ. ನಂತರ ಮಾನ್ಯ 5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಸಾಗರ, ಸರ್ವೆ ಮಾಡಿ ಗಡಿಗಳನ್ನು ಗುರುತು ಮಾಡಿ ಸ್ವಾಧೀನ ಪಡಿಸಬೇಕೆಂದು ನಿರ್ದೇಶಿಸಿರುತ್ತಾರೆ. ಇದುವರೆಗೆ ಸರ್ವೇ ಮಾಡಿ ಸ್ವಾಧೀನವನ್ನು ಪಡೆದುಕೊಂಡಿರುವುದಿಲ್ಲ. ಯಾವುದೇ ನ್ಯಾಯಾಲಯದ ಆದೇಶ ಇಲ್ಲದೆ ನಮ್ಮ ಮೇಲೆ ಕ್ರಮ ಕೈಗೊಂಡಿರುವುದು ಕಾನೂನು ಬಾಹಿರವಾಗಿರುವುದರಿಂದ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇವೆ.

**ಮರುವಿಚಾರಣೆ ಇಲ್ಲ.**

**(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತ ಲೇಖನದ ರೀತ್ಯಾ ಕಂಪ್ಯೂಟರೀಕರಿಸಲಾಯಿತು).**

ಓ. ಹೇ. ಕೇ. ಸರಿ ಇದೆ ಎಂದು ಒಪ್ಪಿದ್ದಾರೆ

ಪ್ರಧಾನ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.
ಸೊರಬ.